ಓ.ಎಸ್.ನಂ.642/2022
ಪಿ.ಡಬ್ಲ್ಯೂ-1

**<u>ಸಾಕ್ಷಿಯನ್ನು ದಿಃ 20.01.2026 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಂದುವರಿದ</u> <u>ಪಾಟೀಸವಾಲುಃ 1 ನೇ ಪ್ರತಿ ವಾದಿ ಪರ ಶ್ರೀ ಎಸ್ ವಿ ಎಸ್ ವಕೀಲರಿಂದ.</u>**

ನಿಪಿ-1 ಕ್ಕೆ 1 ನೇ ಪ್ರತಿವಾದಿ ಮಾಹಿತಿ ನೀಡಿರುತ್ತಾರೆ. ನಿಪಿ-1 ರಲ್ಲಿ 1 ನೇ ಪ್ರತಿವಾದಿಯ ಸಹಿ ಇಲ್ಲ. ದಾವಾ ಆಸ್ತಿಗಳು ಈಗ ನನ್ನ ಹಾಗೂ ಪ್ರತಿವಾದಿಗಳ ಹೆಸರಿಲ್ಲಿ ಇರುತ್ತವೆ. ಸ.ನಂ. 155 ಕ್ಕೆ ಸಂಬಂಧಿಸಿದಂತೆ ನಮ್ಮ ಮಧ್ಯೆ ಮತ್ತು ಜಯಮ್ಮನವರ ಕುಟುಂಬಸ್ಥರ ಮಧ್ಯೆ ಪ್ರತ್ಯೇಕ ಪೊಡುಗಳು ಆಗಿರುತ್ತವೆ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪೊಡು ನಂಬರ್ ಗೊತ್ತಿಲ್ಲ. ಐಟಂ ನಂಬರ್ 2 ರಿಂದ 4 ಮತ್ತು 6 ಆಸ್ತಿಗಳಿಗೆ ಸಂಬಂಧಿಸಿದ ಅರ್ ಟಿ ಸಿ ಗಳಲ್ಲಿ ಇರುವ ನಿಂಗೇಗೌಡ ನನ್ನ ತಂದೆಯ ತಾತಂದಿರು. ನಮ್ಮ ತಂದೆ ಮತ್ತು ಅವರ ಅಣ್ಣ -ತಮ್ಮಂದಿರ ನಡುವೆ ಇಲ್ಲಿಯವರೆಗೂ ಯಾವುದೇ ಪೊಡುಗಳು ಆಗಿ ಯಾವುದೇ ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ.  ದಾವಾದ 5 ನೇ ಐಟಂ ಆಸ್ತಿಯು 1 ನೇ ಪ್ರತಿವಾದಿಯ ಸ್ವ-ಯಾರ್ಜಿತ ಅಸ್ತಿ ಎಂದರೆ ಸರಿಯಲ್ಲ.ಸದರಿ ಆಸ್ತಿಯನ್ನು 1 ನೇ ಪ್ರತಿವಾದಿ ಖರೀದಿ ಮಾಡಿದ್ದು ಆ ಕಾರಣದಿಂದ ಪ್ರತ್ಯೇಕ ಪೊಡುಗಳು ಆಗಿದೆ ಎಂದರೆ ಸರಿಯಲ್ಲ. ಸ.ನಂ. 103 ರಲ್ಲಿ 1 ನೇ ಪ್ರತಿವಾದಿಯು ಮನೆ ನಿರ್ಮಿಸಲು ನಾನು ಮತ್ತು 2 ಮತ್ತು 3 ನೇ ಪ್ರತಿವಾದಿಗಳು ದಿಃ 02-02-2022 ರಂದು ಒಪ್ಪಿಗೆ ಪತ್ರವನ್ನು ಬರೆದು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸ.ನಂ. 103 ರಲ್ಲಿ ಇರುವ ಮನೆ ಮತ್ತು ಪಾಯ ಹಾಕಿರುವ ಜಾಗ ನನಗೆ ಸೇರಿರುತ್ತದೆ. ದಾವಾದ 5 ಮತ್ತು 7 ಅಸ್ತಿಗಳನ್ನು ಹೊರತುಪಡಿಸಿ ಉಳಿದ ಆಸ್ತಿಗಳಲ್ಲಿ ಭಾಗ ನೀಡಲು 1 ನೇ ಪ್ರತಿವಾದಿಗೆ ಯಾವುದೇ ತಕರಾರು ಇಲ್ಲ ಎಂದರೆ ಸಾಕ್ಷಿಯು ಆ ಆಸ್ತಿಗಳಲ್ಲಿಯೂ ಸಹ ಭಾಗ ಬೇಕೆಂದು ನುಡಿಯುತ್ತಾರೆ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೇ. ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ
ಕುಣಿಗಲ್.